A.C.ತಂ 3

ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/ 01/2016–17** ದಿ:19.5.2016

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

| ವಾದಿಗಳು | ಪ್ರತಿವಾದಿಗಳು |
|---|---|
| 1) ಶ್ರೀಮತಿ ಎಸ್.ಅನ್ನಪೂರ್ಣ<br>ಗಂಡ ದಿ॥ ಬಸವರಾಜ<br>ಗ್ರಾಮ : ಹಂಪಸಾಗರ<br>2) ಶ್ರೀ ಯು.ಕೊಟ್ರೇಶ<br>ನ್ಯಾಯವಾದಿಗಳು | 1) ಶ್ರೀ ಬಿ.ಎಸ್.ಮಂಜುನಾಥ<br>ತಂದೆ ದಿ॥ ಶೆಟ್ರು ವಿರುಪಣ್ಣ<br>ಗ್ರಾಮ: ಹಂಪಸಾಗರ |

**ವಿಷಯ : –** **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 35/1 ವಿಸ್ತೀರ್ಣ 3-82 ಎಕರೆ ಜಮೀನು ವಾದಿಗಳ ಹೆಸರಿನಲ್ಲಿ ಪವತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು–ವಿಚಾರಣೆ.**

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 35/1 ವಿಸ್ತೀರ್ಣ 3–82 ಎಕರೆ ಜಮೀನು ಹಾಲಿ ಪಹಣಿ ದಾಖಲು ಶಟ್ರು ಬಸವರಾಜ ತಂದೆ ಶಟ್ರು ವಿರುಪಣ್ಣ ಇವರ ಹೆಸರಿನಲ್ಲಿದ್ದು ಇವರು ದಿನಾಂಕ : 29–10–2015 ರಂದು ಮರಣ ಹೊಂದಿದ ಪ್ರಯುಕ್ತ ವಾದಿ ಪವತಿ ವಾರಸಾ ಪ್ರಕಾರ ಹಕ್ಕು ವರ್ಗಾವಣೆ ಹೊಂದಲು ನಿಗದಿತ ನಮೂನೆಯೊಂದಿಗೆ ತಾಲೂಕಾ ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿಯು ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 104 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್–56/2015–16 ರಂತೆ ಮುಂದಿನ ಹಕ್ಕು ಬದಲಾವಣೆ ಕ್ರಮಕ್ಕಾಗಿ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಸದರಿ ನೋಟೀಸುಗಳು ಗ್ರಾಮ ಲೆಕ್ಕಾಧಿಕಾರಿ ಹಂಪಸಾಗರ ಇವರಿಂದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ನೋಟೀಸುಗಳನ್ನು ಜಾರಿ ಮಾಡಲಾಗಿ ಪ್ರತಿವಾದಿಗಳು ಭೂಮಿಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 6006/2015–16 ರಂತೆ ಲಿಖಿತ ತಕರಾರು ಸಲ್ಲಿಸಿಕೊಂಡಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ

OK

ಅನ್ನಪೂರ್ಣ

23/05/16

ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ವಿಚಾರಣೆಯನ್ನು ದಿನಾಂಕ: 12–04–2016 ರಿಂದ 05–05–2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಪ್ರತಿವಾದಿಗಳು ಹಾಜರಾಗಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಆಸ್ತಿಯ ಹಾಲೀ ಪಹಣಿ ದಾಖಲು ಶ್ರೀ ಶೆಟ್ರು ಬಸವರಾಜ ತಂದೆ ದಿ॥ ಶೆಟ್ರು ವಿರುಪಣ್ಣ ಇವರ ಹೆಸರಿನಲ್ಲಿ ದಾಖಲೆಯಿದ್ದು, ಸದರಿ ಪಹಣಿ ಪರಿಶೀಲಿಸಿದಾಗ ದಿ॥ ಶೆಟ್ರು ಬಸವರಾಜ ಇವರಿಗೆ ಹಕ್ಕು ಬದಲಾವಣೆ ಸಂಖ್ಯೆ MR.H-6/2014-15 ವಿಭಾಗ ದಿನಾಂಕ: 18–09–2014 ರಂತೆ ಹಕ್ಕು ಪ್ರಾಪ್ತವಾಗಿರುವುದು ಕಂಡು ಬಂದಿರುತ್ತದೆ. ಇವರು ದಿನಾಂಕ: 29–10–2015 ರಂದು ಮರಣ ಹೊಂದಿದ್ದು ಹಾಜರುಪಡಿಸಿರುವ ಮರಣ ಪತ್ರದ ಪ್ರಕಾರ ಕಂಡು ಬಂದಿದೆ. ವಾದಿಗಳು ವಾರಸು ಹೆಂಡತಿಯಾಗಿದ್ದು ಹಾಜರುಪಡಿಸಿರುವ ವಂಶವೃಕ್ಷದ ಪ್ರಕಾರ ಕಂಡು ಬರುತ್ತದೆ. ಈ ಪ್ರಕಾರ ವಾದಿಗಳು ನಿಯಮಾನುಸಾರ ಪವತಿ ಹಕ್ಕು ಬದಲಾವಣೆ ಹೊಂದಲು ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿಯು ಕ್ರಮಬದ್ಧವಾಗಿರುತ್ತದೆ.

ಪ್ರತಿವಾದಿಗಳು ಸಲ್ಲಿಸಿರುವ ತಕರಾರು ದಾಖಲೆಯನ್ನು ಪರಿಶೀಲಿಸಲಾಗಿ, ಪ್ರತಿವಾದಿಗಳು ಪಹಣಿ ದಾಖಲು ಶ್ರೀ ಶಟ್ರು ಬಸವರಾಜ ತಂದೆ ವಿರುಪಣ್ಣ ಇವರು ಅಣ್ಣನಾಗಬೇಕಾಗಿಯೂ ಹಾಗೂ ದಿವಂಗತರು ಸೇರಿ ಒಟ್ಟು ಆರು ಜನ ಅಣ್ಣ ತಮ್ಮಂದಿರಿದ್ದು, ಇವರೆಲ್ಲರೂ ನೊಂದಣಿ ರಹಿತ ಪಾಲುವಿಭಾಗ ಹೊಂದಿರುವುದಾಗಿಯೂ ಈ ಪ್ರಕಾರ ಎಲ್ಲಾ ಆಸ್ತಿಗಳು ತಿರಸ್ಕೃತವಾಗಿರುವುದಾಗಿ ಹಾಗೂ ಭಾಗದ ಆಸ್ತಿಯನ್ನು ಕೋರ್ಟ್ ಆದೇಶದ ಮೂಲಕ ಹಕ್ಕು ಬದಲಾವಣೆ ಮಾಡಿಕೊಳ್ಳಲು ಮತ್ತು ವಿವಾದಿತ ಆಸ್ತಿಯಲ್ಲಿ ಎಲ್ಲಾ ಆರು ಜನರಿಗೆ ಪವತಿ ವಾರಸಾ ಪ್ರಕಾರ ಹಕ್ಕು ಇರುವುದಾಗಿ ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿಯಲ್ಲಿ O.S.No. 37/2014-15 ರಂತೆ ಪ್ರಕರಣ ದಾಖಲಾಗಿರುವುದಾಗಿ ವಿವರಿಸುತ್ತಾ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಮಂಡಿಸಿರುತ್ತಾರೆ.

ಆದರೆ ವಿವಾದಿತ ಆಸ್ತಿಯು ದಿ॥ ಎಸ್.ಬಸವರಾಜ ತಂದೆ ದಿ॥ ಶಟ್ರು ವಿರುಪಣ್ಣ ಇವರಿಗೆ ಈ ಹಿಂದೆ ಆರು ಜನರು ಮಾಡಿಕೊಂಡ ಪಾಲುವಿಭಾಗ ಪ್ರಕಾರ ಹಕ್ಕು ಹೊಂದುತ್ತಾ ಹಕ್ಕುದಾರರಾಗಿರುತ್ತಾರೆ. ಅಲ್ಲದೇ ಹಕ್ಕು ಬದಲಾವಣೆ ಪ್ರಕರಣಕ್ಕೆ ಮೇಲ್ಮನವಿ ಸಲ್ಲಿಸದಿರುವುದು

ಕಂಡು ಬರುತ್ತದೆ. ಹಾಗೂ ಪ್ರತಿವಾದಿಗಳು ಹಕ್ಕು ಬದಲಾವಣೆ ಸಂಖ್ಯೆ MR.H-6/2014-15 ದಿನಾಂಕ: 18-09-2014 ರಂತೆ ಹಕ್ಕು ಪ್ರಾಪ್ತವಾಗುವ ಸಮಯದಲ್ಲಿ ತಕರಾರು ಹಾಗೂ ಮೇಲ್ಮನವಿ ಸಲ್ಲಿಸದಿರುವುದು ಪ್ರಶ್ನಾರ್ಥವಾಗಿರುತ್ತದೆ. ಹಾಗೂ ಹಕ್ಕು ಪ್ರಾಪ್ತವಾದ ನಂತರ ವಾದಿಗಳು ಪವತಿ ವಾರಸರ ಪ್ರಕಾರ ಹಕ್ಕು ಬದಲಾವಣೆ ಹೊಂದುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 35/1 ವಿಸ್ತೀರ್ಣ 3-82 ಎಕರೆ ಜಮೀನನ್ನು ಪೀಠಿಕೆಯಲ್ಲಿ ವಿವರಿಸಿದ ವಾಸ್ತವಾಂಶ ಹಿನ್ನೆಲೆಯಲ್ಲಿ ಹಾಲೀ ಪಹಣಿ ದಾಖಲು ಹಕ್ಕುದಾರರ ಹೆಸರನ್ನು ಕಡಿಮೆ ಮಾಡುತ್ತ ವಾರಸಾ ಹೆಂಡತಿ ಶ್ರೀಮತಿ ಶೆಟ್ರು ಅನ್ನಪೂರ್ಣ ಗಂಡ ದಿ॥ ಶೆಟ್ರು ಬಸವರಾಜ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ. ಪವತಿ ಕರ ಸಂದಾಯಿಸಲು ಸೂಚಿಸಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿ ಮತ್ತು ಪ್ರತಿವಾದಿಗಳು
2) ನ್ಯಾಯವಾದಿಗಳಿಗೆ
3) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
4) ಹೆಚ್ಚುವರಿ ಪ್ರತಿ ಕಡತಕ್ಕೆ